# ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ

❑ ಎ. ಶ್ರೀನಿವಾಸ ಪೈ

೧೮೯೩ರಲ್ಲಿ ನಾನು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುತ್ತಿದ್ದಾಗ ಸ್ವಾಮಿ ವಿವೇಕಾನಂದರನ್ನು ಸಂಧಿಸುವ ಭಾಗ್ಯ ನನಗೆ ಒದಗಿಬಂದಿತು—ಅವರು ಚಿಕಾಗೊ ಧರ್ಮಸಮ್ಮೇಳನಕ್ಕೆ ಹೋಗುವುದಕ್ಕೆ ಸ್ವಲ್ಪ ಮುಂಚೆ. ಆಗಿನ್ನೂ ಬಹಳ ಜನಕ್ಕೆ ಅವರ ಪರಿಚಯವಿರಲಿಲ್ಲ. ಆದರೆ ಅವರ ಅಪೂರ್ವ ವ್ಯಕ್ತಿತ್ವ ಅನೇಕರನ್ನು—ವಿಶೇಷವಾಗಿ ವಿದ್ಯಾರ್ಥಿಗಳನ್ನು—ಅವರೆಡೆಗೆ ಆಕರ್ಷಿಸಿತು. ಮದ್ರಾಸಿನಲ್ಲಿದ್ದ ಹಿಂದೂಸಮಾಜದ ಯಾವ ಮುಂದಾಳುಗಳೂ ಅವರೊಡನಿದ್ದುದನ್ನು ನೋಡಿದ ನೆನಪಿಲ್ಲ. ವಿದ್ಯಾರ್ಥಿಗಳು, ಉಪಾಧ್ಯಾಯರುಗಳು, ಎರಡನೆಯ ದರ್ಜೆಯ ಅಧಿಕಾರಿಗಳು ಮತ್ತು ವಕೀಲರು ಅವರಲ್ಲಿಗೆ ಹೆಚ್ಚಾಗಿ ಹೋಗುತ್ತಿದ್ದರು. ೧೮೯೭ರಲ್ಲಿ ಸ್ವಾಮೀಜಿ ಜಗದ್ವಿಖ್ಯಾತರಾಗಿ ಹಿಂದಿರುಗಿದ ಮೇಲೆಯೇ ಮುಂದಾಳುಗಳು, ಉನ್ನತ ಅಧಿಕಾರಿಗಳು ಮತ್ತಿತರರು ಅವರೊಡನೆ ಮಾತನಾಡಲು, ಅವರ ಉಪನ್ಯಾಸ ಕೇಳಲು ಮುತ್ತುತ್ತಿದ್ದರು. ಆಗ (೧೮೯೩) ಅವರು ಭಟ್ಟಾಚಾರ್ಯರ ಮನೆಯಲ್ಲಿ ತಂಗಿದ್ದರು. ನಾನು ನನ್ನ ಸಹವಿದ್ಯಾರ್ಥಿಗಳೊಡನೆ, ಆ ಮನೆಗೆ ಸ್ವಾಮೀಜಿಯವರ ಮಾತು ಕೇಳಲು ಸಂಜೆ ಹೋಗುತ್ತಿದ್ದೆ. ನಾವು ಅವರ ಮುಂದೆ ಸಾಂಪ್ರದಾಯಿಕ ರೀತಿಯಲ್ಲಿ ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದೆವು. ಅವರ ಮಾತಿನಲ್ಲಿ ಅನೇಕ ವಿಷಯಗಳು ಬರುತ್ತಿದ್ದವು. ಅವರ ಮಾತನ್ನು ಕೇಳುವುದೊಂದು ಮಹದಾನಂದ.

ಆಗಿನ ಕಾಲದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಪಡೆದವರಿಗೆ ಹಿಂದೂದರ್ಶನ ಮತ್ತು ತತ್ತ್ವಗಳ ಬಗ್ಗೆ ಅಷ್ಟಾಗಿ ತಿಳಿದಿರಲಿಲ್ಲ. ಆ ಬಗ್ಗೆ ಪುಸ್ತಕಗಳೂ ಬಹಳ ಕಡಮೆ ಇದ್ದವು. ಆಗ ನಮಗೆ ಮಿಲ್, ಹರ್ಬರ್ಟ್ ಸ್ಪೆನ್ಸರ್, ಹಕ್ಸ್‌ಲೆ, ಲೆಸ್ಲೀ ಸ್ಟೀಫನ್ ಮುಂತಾದವರು ದೊಡ್ಡ ದೇವತೆಗಳು. ನಮ್ಮ ದೃಷ್ಟಿಯಲ್ಲಿ ತತ್ತ್ವಶಾಸ್ತ್ರ, ರಾಜನೀತಿ, ಸಮಾಜಶಾಸ್ತ್ರ—ಈ ವಿಷಯಗಳಲ್ಲಿ ಅವರದೇ ಕೊನೆಯ ಮಾತು. ಆದ್ದರಿಂದ ವಿವೇಕಾನಂದರ ವಿಚಾರಪೂರ್ಣ ವಿಷಯನಿರೂಪಣೆ ನಮಗೆ ಅತ್ಯಾಶ್ಚರ್ಯವನ್ನುಂಟುಮಾಡಿತು. ಆದರೆ ನಮಗೆ ಸರಿಯಾದ ಹಿನ್ನೆಲೆ ಇಲ್ಲದಿದ್ದುದರಿಂದ ಅವರ ವಿಚಾರಗಳ ನೈಜ ಮೌಲ್ಯವನ್ನು ತಿಳಿಯುವ ಸಾಮರ್ಥ್ಯವಿರಲಿಲ್ಲ. ಮತ್ತೆ ನಮ್ಮಲ್ಲಿ ಕೆಲವರು ಮೇಲೆ ಹೇಳಿದ ಐರೋಪ್ಯ ದಾರ್ಶನಿಕರ ಪೂರ್ವಾಗ್ರಹಪೀಡಿತರಾಗಿದ್ದರು.

ಒಮ್ಮೆ ವಿವೇಕಾನಂದರು ಆಧುನಿಕ ವಿಕಾಸವಾದವು ಕಪಿಲನ ಸಾಂಖ್ಯತತ್ತ್ವದಲ್ಲಿ ಅಡಕವಾಗಿದೆ ಎಂಬುದನ್ನು ನಮಗೆ ವಿವರಿಸಿದರು. ಇನ್ನೊಮ್ಮೆ ಈಶ್ವರನ ಸಗುಣ ಮತ್ತು ನಿರ್ಗುಣ ಭಾವಗಳನ್ನು ವಿವರಿಸುತ್ತ, ಅಜ್ಞಾತವಾದ ಅಥವಾ ನಾಸ್ತಿಕವಾದಗಳು



ಎಲ್ಲವನ್ನೂ ಅಲ್ಲಗಳೆಯುವುದಿಲ್ಲ, ಅವೂ ಕೂಡ ಶಾಶ್ವತವಾದ ಒಂದು ತತ್ತ್ವವನ್ನು ಒಪ್ಪಿಕೊಳ್ಳಲೇಬೇಕು, ಎಂದು ಅಭಿಪ್ರಾಯಪಟ್ಟರು. ಸಾಂಪ್ರದಾಯಿಕ ಕ್ರೈಸ್ತಮತ ತರ್ಕಬಾಹ್ಯವಾದುದು ಮತ್ತು ಅಸಮರ್ಥನೀಯ ಎಂದರು. ಇದ್ದಕ್ಕಿದ್ದಂತೆಯೇ ಒಂದು ಆತ್ಮ ಸೃಷ್ಟಿಯಾಗಿ ಅದು ಶಾಶ್ವತ ಮುಕ್ತಿಯನ್ನೋ ಅಥವಾ ನರಕವನ್ನೋ ಅನುಭವಿಸುವುದು—ಇದು "ಒಂದೇ ತುದಿಯ ಕಟ್ಟಿ ಇದ್ದ ಹಾಗೆ," ಎಂದರು.

ಲೋಕಾಭಿರಾಮವಾಗಿ ಬಹಳ ಮಾತನಾಡಿದರು. ತಮ್ಮ ಕಾಲೇಜು ದಿನಗಳ ಅನುಭವಗಳನ್ನು ಹೇಳಿದರು. ತಾವು ಮತ್ತು ತಮ್ಮ ಸ್ನೇಹಿತರು ಪ್ರೊಫೆಸರ್‌ಗಳಿಗೆ ಹೇಗೆ ಕಿರುಕುಳ ಕೊಡುತ್ತಿದ್ದರೆಂಬುದನ್ನೂ, ಒಮ್ಮೆ ಕ್ಲಾಸಿಗೆ ಮುಷ್ಕರ ಹೂಡಿ ಎಲ್ಲಿಯೋ ಹೋಗಿ ಸಿಗರೇಟ್ ಸೇದಿದ್ದನ್ನೂ ಹೇಳಿದರು. ಕೆಲವು ಅಮೃತ

ಕಥೆಗಳನ್ನೂ ಹೇಳಿದರು. ಒಬ್ಬ ಕುರುಡನ ಕಥೆ ಹೇಳಿದರು. ಅವನ ಸ್ಮರಣ ಮತ್ತು ಶ್ರವಣ ಶಕ್ತಿ ಅಸಾಧಾರಣವಾದದ್ದು. ಸ್ವಾಮೀಜಿ ಇನ್ನೂ ಚಿಕ್ಕ ಹುಡುಗನಾಗಿದ್ದಾಗ ಅವನು ಇವರು ಹಾಡುವುದನ್ನು ಕೇಳಿದ್ದ. ಅನೇಕ ವರ್ಷಗಳಾದ ಮೇಲೆ ವಿವೇಕಾನಂದರಿದ್ದ ಮನೆಗೆ ಆತ ಒಂದು ರಾತ್ರಿ ಬಂದ. ಆಗ ಅವರು ಹಾಡುವುದನ್ನು ಕೇಳಿ ಧ್ವನಿಯಿಂದಲೇ ಅವರನ್ನು ಗುರುತಿಸಿ, ಹಿಂದೆ ಇಂಥ ಸ್ಥಳದಲ್ಲಿ ಹಾಡಿದ ಹುಡುಗ ನೀವೇ ಅಲ್ಲವೇ ಎಂದು ಅವರನ್ನು ಕೇಳಿದ. ಆ ಕುರುಡ ಬೀದಿಯಲ್ಲಿ ಹೋಗುವಾಗ ಚಪ್ಪಾಳೆ ತಟ್ಟಿ ಆ ಧ್ವನಿಯ ಮೂಲಕ "ನನ್ನ ಬಲಕ್ಕೆ ಮೈದಾನ ವಿದೆ" ಅಥವಾ "ನನ್ನ ಎಡಕ್ಕೆ ಎತ್ತರದ ಮನೆಯಿದೆ" ಎಂದು ಹೇಳುತ್ತಿದ್ದ.

ಅವರು ಹೇಳಿದ ಇನ್ನೊಂದು ಕಥೆ ಜಾದೂಗಾರನದು. ಅವನಿಗೆ ಕೆಲವು ಸಿದ್ಧಿ ಗೊತ್ತಿದ್ದವು. ಒಬ್ಬ ಐರೋಪ್ಯ ಅವನ ಶಕ್ತಿಯನ್ನು ಪರೀಕ್ಷಿಸಬೇಕೆಂದು ಆತನನ್ನು ಗಾಡಿಯಲ್ಲಿ ಬೇರೊಂದು ಕಡೆ ಕರೆದುಕೊಂಡು ಹೋದ. ಹೋಗುತ್ತಿರುವಾಗ ಆ ಜಾದೂಗಾರ ಐರೋಪ್ಯನನ್ನು "ಈಗ ಏನು ಬೇಕೊ ಕೇಳು, ಕೊಡುತ್ತೇನೆ" ಎಂದ. ಅವನು ಸ್ವಲ್ಪ ಹೊತ್ತು ಯೋಚಿಸಿ, "ಒಂದು ಬಾಟ್ಲಿ ಶಾಂಪೇನ್ ಕೊಡು" ಎಂದು ಕೇಳಿದ. ಗಾಡಿಯಲ್ಲಿ ಅದಿಲ್ಲವೆಂದು ಅವನಿಗೆ ಗೊತ್ತಿತ್ತು. ಜಾದೂಗಾರ ಗಾಳಿಯಲ್ಲಿ ಏನನ್ನೋ ಹಿಡಿದಂತೆ ಮಾಡಿ ಒಂದು ಬಾಟ್ಲಿ ಶಾಂಪೇನ್ ಅವನ ಮುಂದಿರಿಸಿದ. ಅನಂತರ "ನೋಡಿಲ್ಲಿ" ಎಂದು ಹೇಳಿ ಬಲಗಡೆಯಿದ್ದ ಅಂಗಡಿಗಳ ಸಾಲಿನ ಕಡೆ ಕೈ ಆಡಿಸಿದ. ಕೂಡಲೆ ಆ ಸಾಲಿನಲ್ಲಿದ್ದ ದೀಪವೆಲ್ಲ ಆರಿಹೋಯಿತು. ಎಡಗಡೆಯ ಸಾಲಿನಲ್ಲಿಯ ದೀಪ ಮೊದಲಿನಂತೆಯೇ ಉರಿಯುತ್ತಿತ್ತು. ಬೀದಿಯ ಜನರು ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದಂತೆಯೇ ಜಾದೂಗಾರ ಮತ್ತೆ ಕೈಯಾಡಿಸಿ ದೀಪ ಉರಿಯುವಂತೆ ಮಾಡಿದ.

ಐರೋಪ್ಯರು ಹೇಗೆ ದೇಶೀಯರನ್ನು ತುಚ್ಛವಾಗಿ ಕಾಣುತ್ತಿದ್ದರೆಂಬುದರ ಬಗ್ಗೆ ಮಾತನಾಡುತ್ತ ಅವರು ಒಂದು ಘಟನೆಯನ್ನು ಹೇಳಿದರು—ತುಂಬು ಆತ್ಮಾಭಿಮಾನದ ಭಾರತೀಯನಂತೆ ತೀವ್ರ ಭಾವೋದ್ವೇಗದಿಂದ ಹೇಳಿದರು. ಒಮ್ಮೆ ಕಲಕತ್ತೆಯಲ್ಲಿ ಒಬ್ಬ ಐರೋಪ್ಯ ವಕೀಲನು ಭಾರತೀಯ ಬ್ಯಾರಿಸ್ಟರ್ ಒಬ್ಬನನ್ನು ಮುಖಭಂಗಗೊಳಿಸಿದನೆಂದು ಪ್ರಮುಖ ವಕೀಲರು, ಕಕ್ಷಿದಾರರು, ಎಲ್ಲ ಸೇರಿ ಒಂದು ಮೀಟಿಂಗ್ ಮಾಡಿ ಆ ಐರೋಪ್ಯ ವಕೀಲನನ್ನೇ ಹೊರಹಾಕುವುದೆಂದು ನಿರ್ಧರಿಸಿದರು. "ಅಂದಿನಿಂದ ಆ ವಕೀಲ ತನ್ನ ಹೆಬ್ಬೆರಳು ಚೀಪಬೇಕಾಯಿತು," ಎಂದು ವಿವೇಕಾನಂದರು ಹೆಮ್ಮೆಯಿಂದ ತಮ್ಮ ಹೆಬ್ಬೆರಳನ್ನು ತುಟಿಯ ಹತ್ತಿರ ತೆಗೆದುಕೊಂಡು ಹೋಗುತ್ತ ನುಡಿದರು.

ಜಿ.ಎ.ನಟೇಶನ್ ಅಂಡ್ ಕಂಪೆನಿಯವರು ಪ್ರಕಟಿಸಿದ "ಸ್ವಾಮಿ ವಿವೇಕಾನಂದರ ಭಾಷಣಗಳು ಮತ್ತು ಬರಹಗಳು" ಎಂಬ ಪುಸ್ತಕದಲ್ಲಿರುವ ಅವರ ಭಾವಚಿತ್ರಗಳು ಅವರು ನೋಡಲು ಹೇಗೆ ಕಾಣುತ್ತಿದ್ದರೆಂಬುದನ್ನು ಸೂಚಿಸುತ್ತವೆ. ಆದರೆ ಯಾವ ಚಿತ್ರವೂ ಅವರ ಕಣ್ಣುಗಳಲ್ಲಿದ್ದ ಶಕ್ತಿಯನ್ನು ಪ್ರತಿಬಿಂಬಿಸಲಾರವು. ಆ ಕಣ್ಣುಗಳು ಅದ್ಭುತ ಕಾಂತಿಯ ಚಿಲುಮೆಯಂತಿದ್ದವು. ಕೋಲ್‌ರಿಜ್‌ನ ಪ್ರಸಿದ್ಧ ಕವನದಲ್ಲಿ ಬರುವ Ancient Mariner ನಂತೆ ಅವರು ತಮ್ಮ ಕಣ್ಣುಗಳಿಂದ ನಮ್ಮನ್ನು ಸೆರೆಹಿಡಿಯುತ್ತಿದ್ದರು. ಅವರ ಕಂಠದಲ್ಲಿಯೂ ಅವರ್ಣನೀಯವಾದ ಆಕರ್ಷಣೆಯಿತ್ತು. ಮಿಸೆಸ್ ಬೆಸೆಂಟ್ ಅವರ ಕಂಚಿನ ಕಂಠದಂತಲ್ಲವಾದರೂ ಅವರ ಧ್ವನಿಯಲ್ಲಿದ್ದ ಮೃದು-ಮಾಧುರ್ಯ ನಮ್ಮನ್ನು ಮುಗ್ಧಗೊಳಿಸುತ್ತಿತ್ತು. ಅತ್ಯಂತ ಸುಂದರವಾಗಿ ಹಾಡುತ್ತಿದ್ದರು. ಒಂದು ದಿನ ನಾವು ಅವರ ಹಾಡನ್ನು ಕೇಳುತ್ತಿರುವಾಗ ಒಂದು ಚಿಕ್ಕ ಮಗು— ಭಟ್ಟಾಚಾರ್ಯರ ಮಗಳಿರಬಹುದು— ಅಂಬೆಗಾಲಿಡುತ್ತಾ ಬಂದಿತು. ಅವರು ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡು ಒಂದು ಪಂಜಾಬಿ ಹಾಡನ್ನು ಹಾಡಿದರು. ಆ ಹಾಡು ಗುರುನಾನಕ್‌ರದೆಂದು ಹೇಳಿ ಅದರ ಮೂಲವನ್ನು ವಿವರಿಸಿದರು. ಒಂದು ಸಂಜೆ ಆರತಿಯ ಸಮಯದಲ್ಲಿ ನಾನಕ್ ಒಂದು ದೇವಸ್ಥಾನಕ್ಕೆ ಹೋದಾಗ ಅಲ್ಲಿಯ ಬ್ರಾಹ್ಮಣ ಪೂಜಾರಿಗಳು ಅವರನ್ನು ಒಳಗೆ ಬಿಡಲಿಲ್ಲ. ಆಗ ಅವರು ಅತ್ತ ತಿರುಗಿ ಈ ಹಾಡನ್ನು ಹಾಡಿದರು.ಇದರಲ್ಲಿ—ಆಗಸವೆ ಬೆಳ್ಳಿಯ ತಟ್ಟೆ, ನಕ್ಷತ್ರಗಳು ನೀರಾಂಜನ, ಸುಗಂಧವಾಹೀ ಸಂಧ್ಯಾ ಸಮೀರವೇ ಧೂಪ—ಈ ರೀತಿಯ ವರ್ಣನೆಯಿತ್ತು. ನಾವು ನೋಡಿದ ಅನೇಕ ಬಂಗಾಳಿಗಳಂತೆ ವಿವೇಕಾನಂದರದು ಬೊಜ್ಜು ದೇಹವಲ್ಲ. ಆದರೆ ಉತ್ತಮವಾದ ಮೈಕಟ್ಟು, ದಷ್ಟಪುಷ್ಟವಾದ ದೇಹ, ಮೈಬಣ್ಣ ಕಂದು, ಸ್ವಲ್ಪ ತಾಮ್ರದಂತೆ.

ವಿವೇಕಾನಂದರ ನಡೆ-ನುಡಿಯಲ್ಲಿ ಅತ್ಯಂತ ಸ್ವಾಭಾವಿಕತೆ, ಸಹಜತೆಯನ್ನು ಕಾಣಬಹುದಿತ್ತು—ಯಾವುದೇ ರೂಢಿ-ನಿಯಮಗಳಿಗೆ ಬದ್ಧವಾಗಿರಲಿಲ್ಲ. ಮುಖ ಗಂಟುಹಾಕಿಕೊಂಡಿರುವುದು, ಅಳೆದು-ಸುರಿದು ಮಾತನಾಡುವುದು, ಸಾಮಾನ್ಯವಾಗಿ ನಾವು ಸಾಧುಗಳಲ್ಲಿ ಕಾಣುವ ಕೋಪ—ಇವಾವುವೂ ಅವರಲ್ಲಿರಲಿಲ್ಲ. ಯಾರಾದರೂ ಅಸಂಬದ್ಧ ಪ್ರಶ್ನೆಗಳನ್ನು ಕೇಳಿದರೆ ಅಥವಾ ತಮ್ಮ ಜ್ಞಾನವನ್ನು ವಿಪರೀತವಾಗಿ ಪ್ರದರ್ಶಿಸಲು ಬಂದರೆ ಅವರಿಗೆ ತಕ್ಕ ಪ್ರತಿಕ್ರಿಯೆ ತೋರಿಸುತ್ತಿದ್ದರು. ಒಂದು ದಿನ ಬೆಳಿಗ್ಗೆ (ಅವರು ಅಮೆರಿಕದಿಂದ ಬಂದ ಮೇಲೆ) ಸಭೆ ಕೊನೆಗೊಳ್ಳುವ ಸಮಯದಲ್ಲಿ ಒಬ್ಬ ಯುವಕ ಉದ್ಧಟತನದಿಂದ ಕೇಳಿದ "ಈ ಪ್ರಪಂಚದಲ್ಲಿ ದುಃಖಕ್ಕೆ ಕಾರಣವೇನು ಸ್ವಾಮಿ?" ಎಂದು. "ಅಜ್ಞಾನವೇ ದುಃಖಕ್ಕೆ ಕಾರಣ" ಎಂದು ಖಂಡತುಂಡಾಗಿ ನುಡಿದು ವಿವೇಕಾನಂದರು ಸಂದರ್ಶನವನ್ನು ಸಮಾಪ್ತಿಗೊಳಿಸಿದರು. ಇನ್ನೊಂದು ಸಂದರ್ಭದಲ್ಲಿ ಶ್ರೋತೃಗಳಲ್ಲಿ ಒಬ್ಬರು ಸ್ವಾಮೀಜಿಯವರ ಅಭಿಪ್ರಾಯವು ಕೆಲವು ಅಂಶಗಳಲ್ಲಿ ಶಂಕರಾಚಾರ್ಯರ ಮತಕ್ಕೆ ಹೊಂದಿಕೊಳ್ಳುವುದಿಲ್ಲವೆಂದು ಹೇಳಿದರು. ಸ್ವಾಮೀಜಿ ಕೂಡಲೇ ಹೇಳಿದರು: "ಸರಿ, ಶಂಕರಾಚಾರ್ಯರು ಒಬ್ಬ ಮನುಷ್ಯ, ನೀವೂ ಒಬ್ಬ ಮನುಷ್ಯ. ನೀವೇ ವಿಚಾರ ಮಾಡಿ ನೋಡಿ." ಸಂಪ್ರದಾಯವಾದಿ ಪಂಡಿತರೊಬ್ಬರು ಸ್ವಾಮೀಜಿಯವರ ಉಚ್ಚಾರಣೆಯನ್ನು ನಿಂದಿಸುತ್ತಾ ತಮ್ಮ ವಿದ್ವತ್ತನ್ನು ಪ್ರದರ್ಶಿಸಲು ಪ್ರಯತ್ನಿಸಿದರು. ಅವರ ಬಗ್ಗೆ ಸ್ವಾಮೀಜಿ

ಹೇಳಿದರು: "ಆ ಮನುಷ್ಯನಿಗೆ 'ಜ್ಞಾನ' ಶಬ್ದವನ್ನೇ ಸರಿಯಾಗಿ ಉಚ್ಚರಿಸಲು ಬರುವುದಿಲ್ಲ, ಮತ್ತೆ ನನ್ನ ಸಂಸ್ಕೃತ ಉಚ್ಚಾರಣೆಯನ್ನು ನಿಂದಿಸುವ ಧಿಮಾಕು ಬೇರೆ!"

೧೮೯೭ರಲ್ಲಿ ಸ್ವಾಮೀಜಿ ಅಮೆರಿಕದಿಂದ ಹಿಂದಿರುಗಿದ ಮೇಲೆ ಅವರಿಗೆ ದೊರೆತ ಸಾರ್ವಜನಿಕ ಸ್ವಾಗತ ಅಮೋಘ, ನೆರೆದ ಜನಸಂದಣಿ ಅಪಾರ. ಅವರ ಮೊದಲ ಸಾರ್ವಜನಿಕ ಭಾಷಣ ಯಶಸ್ವಿಯಾಗಲಿಲ್ಲ. ಅದಕ್ಕೆ ಕಾರಣ ಜನರ ಅತಿ ಹುರುಪು. ನನಗೆ ನೆನಪಿರುವಂತೆ ಒಂದು ದೊಡ್ಡ ಸರ್ಕಸ್ ಟೆಂಟ್ ಒಳಗೆ ಅವರ ಮೊದಲ ಭಾಷಣವನ್ನು ವ್ಯವಸ್ಥೆಗೊಳಿಸಲಾಗಿತ್ತು. ಆದರೆ ಅಲ್ಲಿಯೂ ಕೂಡ ಜನರಿಗೆ ಜಾಗ ಸಾಕಾಗದೆ, ಸ್ವಾಮೀಜಿ ಹೊರಗೆ ಬಂದು ಗಾಡಿಯ ಮೇಲೆ ನಿಂತು "ಗೀತೋಪದೇಶದಂತೆ" ಭಾಷಣ ಮಾಡಬೇಕಾಯಿತು. ಅವರು ತಮಗೆ ಸಾಧ್ಯವಾದಷ್ಟು ಧ್ವನಿಯೇರಿಸಿದರು. ಆದರೂ ಪ್ರಯೋಜನವಾಗಲಿಲ್ಲ. ಕೂಗಾಟ, ಅವ್ಯವಸ್ಥೆ ಅತಿಯಾಗಿ ಭಾಷಣ ನಿಲ್ಲಿಸಬೇಕಾಯಿತು. ಮುಂದೆ ಅವರು ವಿಕ್ಟೋರಿಯಾ ಹಾಲಿನಲ್ಲಿ ಮಾಡಿದ ಉಪನ್ಯಾಸ "ಭಾರತದ ಮಹಾಪುರುಷರು" ಅದ್ಭುತವಾಗಿತ್ತು. ಅವರ ನಿರರ್ಗಳ ವಾಗ್ಝರಿ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತು. ಆ ಭಾಷಣದಲ್ಲಿ ರಾಸಕ್ರೀಡೆಯನ್ನು ವಿವರಿಸಿ ಅದರ ಅಂತರಾರ್ಥವನ್ನು ಹೇಳುವಾಗ ಅವರ ಮುಖದಲ್ಲಿ, ವಿಶೇಷವಾಗಿ ಕಣ್ಣಿನಲ್ಲಿ, ದಿವ್ಯಭಾವ ವ್ಯಕ್ತವಾಗಿತ್ತು, ನಮ್ಮ ಅಂತರ್ಯವನ್ನು ಕಲಕುವಂತಿತ್ತು.

ಅನೌಪಚಾರಿಕ ವಿಚಾರವಿನಿಮಯ ಮತ್ತು ಪ್ರಶ್ನೋತ್ತರ ಸಭೆಯನ್ನು ಬೆಳಗ್ಗೆ ವ್ಯವಸ್ಥೆಗೊಳಿಸಲಾಗುತ್ತಿತ್ತು. ಇದಕ್ಕೆ ಮದ್ರಾಸಿನ ಪ್ರತಿಭಾನ್ವಿತರೇ ಹೆಚ್ಚಾಗಿ ಬರುತ್ತಿದ್ದುದರಿಂದ ವಿದ್ಯಾರ್ಥಿಗಳಾದ ನಮಗೆ ಸ್ವಾಮೀಜಿಯವರ ಹತ್ತಿರ ಹೋಗುವುದೂ ದುಃಸಾಧ್ಯವಾಗುತ್ತಿತ್ತು. ಒಂದು ಬೆಳಿಗ್ಗೆ ಐರೋಪ್ಯ ಮಹಿಳೆಯೋರ್ವಳು ಬಂದು ಸಂನ್ಯಾಸಿಗಳ ಒತ್ತಾಯದ ಬ್ರಹ್ಮಚರ್ಯವನ್ನು ನಿಂದಿಸಿ ಮಾತನಾಡಿದಳು. ಬ್ರಹ್ಮಚರ್ಯದ ಆವಶ್ಯಕತೆಯನ್ನು ಮನಶ್ಶಾಸ್ತ್ರೀಯವಾಗಿ ಮತ್ತು ತಾತ್ತ್ವಿಕವಾಗಿ ವಿವರಿಸಿ ಕೊನೆಯಲ್ಲಿ ಸ್ವಾಮೀಜಿ ಹೇಳಿದರು: "ನಿಮ್ಮ ದೇಶದಲ್ಲಿ ಅವಿವಾಹಿತನಿಗೆ ಜನ ಹೆದರುತ್ತಾರೆ. ಆದರೆ ಇಲ್ಲಿ ನೋಡಿ, ಅವಿವಾಹಿತನಾದ ನಾನು ಪೂಜಿಸಲ್ಪಡುತ್ತಿದ್ದೇನೆ."

ಒಮ್ಮೆ ಸ್ವಾಮೀಜಿ ತಮ್ಮ ಬಗ್ಗೆ ಹೀಗೆ ಹೇಳಿದರು: "ನನಗೀಗ ಮೂವತ್ತು ವರ್ಷ ವಯಸ್ಸು, ಸ್ತ್ರೀಯೆಂಬುದನ್ನೇ ನಾನರಿಯೆ." ಒಮ್ಮೆ ಅವರು ಯುವ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದರು, ಅವರ ಆದ್ಯ ಕರ್ತವ್ಯ ದೈಹಿಕ ಶಕ್ತಿ ಮತ್ತು ಆರೋಗ್ಯವನ್ನು ಬೆಳೆಸಿಕೊಳ್ಳುವುದು ಎಂದು. "ನಿಮ್ಮ ಎಡಗೈಯಲ್ಲಿ ಗೀತೆ, ಬಲಗೈಯಲ್ಲಿ ಫುಟ್‌ಬಾಲ್ ಇರಲಿ." ದೈಹಿಕವಾಗಿ ದುರ್ಬಲರಾದವರೇ ಬಹು ಬೇಗನೇ ಪ್ರಲೋಭನೆಗೊಳಗಾಗುತ್ತಾರೆ. ದೈಹಿಕವಾಗಿ ಶಕ್ತಿಶಾಲಿಗಳಾದವರು ದುರ್ಬಲರಿಗಿಂತ ಹೆಚ್ಚಾಗಿ ಪ್ರಲೋಭನೆಗಳನ್ನು ತಡೆಯಬಲ್ಲರು ಮತ್ತು ಅವರಲ್ಲಿ ಹೆಚ್ಚು ಆತ್ಮನಿಗ್ರಹವಿರುತ್ತದೆ.

ಒಮ್ಮೆ "ಇವನೊಬ್ಬ ಕಾವಿಬಟ್ಟೆಯುಟ್ಟ ಪೈಲ್ವಾನ್" ಎಂದು ತಮ್ಮನ್ನು ನಿರ್ದೇಶಿಸಿ ಹೇಳಿದರು.

೧೮೯೭ರಲ್ಲಿ ಸ್ವಾಮೀಜಿ ಕ್ಯಾಸಲ್ ಕೆರ್ನನ್ (ಈಗಿನ ವಿವೇಕಾನಂದ ಇಲ್ಲಮ್)ನಲ್ಲಿ ತಂಗಿದ್ದರು. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳಾದ ನಮಗೆ ಆಹ್ವಾನವಿತ್ತು. ನಾವು ಸ್ವಾಮೀಜಿಯವರೊಡನೆ ಊಟ ಮಾಡಿದೆವು. ಅವರ ಬಾಯಿರುಚಿ ಒಳ್ಳೆಯದಿದ್ದು, ಅವರು ಚೆನ್ನಾಗಿ ಊಟ ಮಾಡುತ್ತಿದ್ದರು. ಒಮ್ಮೆ ಐಸ್‌ಕ್ರೀಂ ಕಡೆ ಬೊಟ್ಟು ಮಾಡಿ ವಿನೋದದಿಂದ ಹೇಳಿದರು : "ನಾನು ಎಲ್ಲವನ್ನೂ ತ್ಯಜಿಸಬಲ್ಲೆ, ಇದೊಂದನ್ನು ಬಿಟ್ಟು." ಬೆಂಗಳೂರಿನಿಂದ ಬುಟ್ಟಿಗಟ್ಟಳೆ ಹಣ್ಣು ಅವರಿಗಾಗಿ ಬರುತ್ತಿತ್ತು. ಬಂದಕೂಡಲೇ ಅದನ್ನು ತೆರೆದು ಅಲ್ಲಿದ್ದವರಿಗೆಲ್ಲ ಹಣ್ಣುಗಳನ್ನು ಹಂಚಿ ತಾವೂ ತಿನ್ನುತ್ತಿದ್ದರು. ಕೆಲವೊಮ್ಮೆ ವಿದ್ಯಾರ್ಥಿಗಳೊಡನೆ ಸಮುದ್ರಸ್ನಾನ ಮಾಡುತ್ತಿದ್ದರು.

ಟ್ರಿಪ್ಲಿಕೇನ್ ಲಿಟರರಿ ಸೊಸೈಟಿಯ ಕೊಠಡಿಯಲ್ಲಿ ಅನೌಪಚಾರಿಕ ವಿಚಾರ ವಿನಿಮಯ ನಡೆಯುತ್ತಿತ್ತು. ದಿವಾನ್ ಬಹದ್ದೂರ್ ಆರ್. ರಘುನಾಥರಾವ್ ಮುಂತಾದ ಸಮಾಜ ಸುಧಾರಕರು ಅದರಲ್ಲಿ ಭಾಗವಹಿಸುತ್ತಿದ್ದರು. ಅವರಲ್ಲಿ ಎ. ಸುಬ್ಬರಾಯರೂ ಒಬ್ಬರು. ಸುಬ್ಬರಾವ್ ಅಜ್ಞೇಯವಾದಿಗಳು (agnostic). ಕೆಲವು ಸಮಾಜ ಸುಧಾರಕರನ್ನು ಸ್ವಾಮೀಜಿ ದಂಗುಬಡಿಸುತ್ತಿದ್ದರು, ಅವರ ಸುಧಾರಣಾ ಕ್ರಮಗಳನ್ನು ಖಂಡಿಸುತ್ತಿದ್ದರು. ಒಮ್ಮೆ ಎ. ಸುಬ್ಬರಾಯರು ಹಿಂದಿನ ಋಷಿಗಳ ವಿಚಾರಶಕ್ತಿಯನ್ನೂ ಅವರ ಅಭಿಪ್ರಾಯಗಳನ್ನೂ ಅವಹೇಳನ ಮಾಡಿದಾಗ, ಸುದೀರ್ಘ ಸಾಧನೆಯ ಮೂಲಕ ಋಷಿಗಳು ಗಳಿಸಿದ್ದ ಧ್ಯಾನಶಕ್ತಿಯ ಬಗ್ಗೆ ಸುಬ್ಬರಾಯರಿಗೆ ಏನೂ ತಿಳಿಯದು ಎಂದು ಹೇಳಿ, "ಆ ಋಷಿಗಳಂತೆ ನೀವು ಅರ್ಧ ನಿಮಿಷ ಚಿಂತಿಸಿದರೂ ಸುಟ್ಟು ಭಸ್ಮವಾಗುತ್ತೀರಿ" ಎಂದು ನುಡಿದರು.

ತಮ್ಮ ಗುರು ಶ್ರೀರಾಮಕೃಷ್ಣರ ಬಗ್ಗೆ ಮಾತನಾಡಿದರು. ಶ್ರೀರಾಮಕೃಷ್ಣರು ತಮ್ಮ ಆತ್ಮಾಭಿಮಾನವನ್ನು ಕೊಲ್ಲಲು ಅನುಸರಿಸುತ್ತಿದ್ದ ವಿಚಿತ್ರ ವಿಧಾನಗಳನ್ನು ಹೇಳಿದರು. ಇವುಗಳ ವೈಶಿಷ್ಟ್ಯವನ್ನು ಗ್ರಹಿಸುವುದು ಅನೇಕರಿಗೆ—ವಿಶೇಷವಾಗಿ ಪಾಶ್ಚಾತ್ಯರಿಗೆ—ದುಸ್ಸಾಧ್ಯ. ಸಾಮಾನ್ಯ ಅಮೆರಿಕನ್ನರನ್ನು ಕುರಿತು ಅವರಂದರು : "ನಾನು ಇವುಗಳನ್ನು ಅವರಿಗೆ ಹೇಳಿದ್ದರೆ ನನ್ನನ್ನೂ ಮತ್ತು ನನ್ನ ಗುರುವನ್ನೂ ಚರಂಡಿಗೆ ಎಸೆಯುತ್ತಿದ್ದರು."

ಜನಸಾಮಾನ್ಯರ ಮೇಲೆ ಧಾರ್ಮಿಕ ಶ್ರದ್ಧೆಯ ಪರಿಣಾಮವನ್ನು ಕುರಿತು ಚರ್ಚಿಸುತ್ತ ಅವರಂದರು, "ಯೂರೋಪ್ ಮತ್ತು ಅಮೆರಿಕದಲ್ಲಿ ಕೊಳೆಗೇರಿಯ ಜನರು ಎಂಥ ಪ್ರಾಣಿಸಹಜ ಜೀವನವನ್ನು ನಡೆಸುತ್ತಿದ್ದಾರೆ ಎಂಬುದನ್ನು ನೀವು ನೋಡಿದ್ದರೆ ಮತ್ತು ಅದನ್ನು ಭಾರತೀಯ ಜನಸಾಮಾನ್ಯರ ಜೀವನಕ್ಕೆ ಹೋಲಿಸಿದ್ದರೆ ಆಗ ಹಿಂದೂ ಧಾರ್ಮಿಕ ನಂಬಿಕೆಗಳಿಂದ ಜನಸಾಮಾನ್ಯರ ಮೇಲೆ ಆಗಿರುವ ಪರಿಣಾಮಗಳ ವಿಷಯದಲ್ಲಿ ನಿಮಗಿರುವ ಸಂಶಯ ಮಾಯವಾಗುತ್ತಿತ್ತು."

(ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಟನೆ "ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ" ಗ್ರಂಥದಿಂದ)